**( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )**

ಅಸಲು ದಾವೆ ನಂ.**315/2016**

**ದಿನಾಂಕಃ 04-09-2024,** ಪಿ **ಡಬ್ಲ್ಯೂ–1**

ಮುಂದುವರೆದ ಪಾಟೀ ಸವಾಲು ಃ ಶ್ರೀ ಎನ್ ಕೆ ವಕೀಲರಿಂದಃ

ನಾನು ಸಲ್ಲಿಸಿರುವ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿರುವ ವಿಚಾರಗಳನ್ನು ನಾನು ತಿಳಿದುಕೊಂಡಿದ್ದೇನೆ. ನಾನು ಇತರೆ ವಾದಿಯರ ಪರವಾಗಿ ಸಾಕ್ಷ್ಯ ನುಡಿಯುತ್ತಿದ್ದೇನೆ. ಅಸಲು ದಾವೆ ನಂ.353/2018 ರಲ್ಲಿ ಹಾಜರಾಗಲು ನನಗೇನು ತೊಂದರೆ ಇರಲಿಲ್ಲ. ದಾವಾ ಆಸ್ತಿಯ ಪಹಣಿ ಪತ್ರಿಕೆ ಹಾಲಿ ಈಗ ನನ್ನ ಅಜ್ಜ ಅಜ್ಜಿ ರವರ ಹೆಸರುಗಳಲ್ಲಿದೆ. ಸರ್ವೆ ನಂಬರ್ ಗೊತ್ತಿಲ್ಲದೇ ಪ್ರತಿವಾದಿಯ ಗಂಡ ಜಂಟಿ ಖಾತೆ ಮಾಡಿಸಿದ್ದಾರೆ. ನಿಪಿ-1 ರಲ್ಲಿ ಖಾತೆ ಬದಲಾವಣೆ ಆಗುವ ಮೊದಲು ದೇಸಿ ರವರ ಹೆಸರಿನಲ್ಲಿ ಖಾತೆ ಇತ್ತು. ನಾನು ಹಾಜರುಪಡಿಸಿರುವ ನಿಪಿ-8 ರಿಂದ 11 ರ ಪ್ರಕಾರ ದಾವಾ ಆಸ್ತಿಯ ಖಾತೆ ಗೋವಿಂದಯ್ಯ ಬಿನ್ ತಿಮ್ಮಯ್ಯ ಮತ್ತು ಚಿಕ್ಕ ಹೊನ್ನಮ್ಮ ಕೋಂ ಗೋವಿಂದಯ್ಯ ರವರ ಹೆಸರಿನಲ್ಲಿ ಖಾತಾ ಇತ್ತು ಎಂದರೆ ಸರಿ. ಗೋವಿಂದಯ್ಯ ಬಿನ್ ತಿಮ್ಮಯ್ಯ ಎಂದರೆ ಪ್ರತಿವಾದಿಯ ಗಂಡ.

ಹೊನ್ನಮ್ಮ ಕೋಂ ಲೇಟ್ ಗೋವಿಂದಪ್ಪ ಮತ್ತು ಚಿಕ್ಕಹೊನ್ನಮ್ಮ ಕೋಂ ಗೋವಿಂದಯ್ಯ ರವರಿ ಹೆಸರಿನಲ್ಲಿ ಜಂಟಿ ಖಾತೆ ಮಾಡಿಸಲು ನಾನು ಉಪವಿಭಾಗಾಧಿಕಾರಿ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿಲ್ಲ. ನಾನು ಜಂಟಿ ಖಾತೆ ಮಾಡಿಸಲು ನಾನು ಅರ್ಜಿಯನ್ನು ಕೊಟ್ಟಿಲ್ಲ.

ದಾವ ಆಸ್ತಿಯ ಪೂರ್ವಕ್ಕೆ ದಾಸೀ ತಿಮ್ಮಯ್ಯ ರವರ ಜಮೀನು, ದಾಸೀ ತಿಮ್ಮಯ್ಯ ಪ್ರತಿವಾದಿಯ ಮಾವ ಎಂದರೆ ಸಾಕ್ಷಿಯು ದಾಸೀ ತಿಮ್ಮಯ್ಯ ಪೇಟೆ ಮಾಚಗೌಡನಹಳ್ಳಿಯವರು

ಎಂದು ನುಡಿಯುತ್ತಾರೆ. ಪಶ್ಚಿಮಕ್ಕೆ ನಮ್ಮ ಬಾಬ್ತು ಜಮೀನು, ಉತ್ತರಕ್ಕೆ ಪಾಪಣ್ಣ ರವರ ಜಮೀನು, ದಕ್ಷಿಣಕ್ಕೆ ದೊಡ್ಡಯ್ಯ ರವರ ಜಮೀನು ಬರುತ್ತದೆ.

ಒಟ್ಟು ಕುಟುಂಬದ ಸರ್ವೆ ನಂ.45/2ಎ ರಲ್ಲಿ 2 ಎಕರೆ 9 ಗುಂಟೆ, ಸರ್ವೇ ನಂ.45/2 ಬಿ ರಲ್ಲಿ 25 ಗುಂಟೆ, ಮತ್ತು ಸರ್ವೆ ನಂ.45/4 ರಲ್ಲಿ 10 ಗುಂಟೆ ಜಮೀನನ್ನು ದೇಸಿ ಮತ್ತು ಅವರ ಮಕ್ಕಳು ವಿಭಾಗ ಮಾಡಿಕೊಂಡಿದ್ದಾರೆ. ಈ ಸಂಬಂದ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ನಮ್ಮ ಮನೆ ಕಳ್ಳತನ ಆದ್ದರಿಂದ ದಾಖಲೆಗಳು ಕಳುವಾಗಿರುತ್ತವೆ ಎಂದು ನುಡಿಯುತ್ತಾರೆ. ಒಟ್ಟು ಕುಟುಂಬದ 3 ಎಕರೆ 4 ಗುಂಟೆ ಜಮೀನಿನ ಪೈಕಿ ದಾಸೀ ರವರ ಮೊದಲನೆಯ ಮಗ ಅಣ್ಣೇಗೌಡ ಉಃ ಜವರ ರವರಿಗೆ ಬೇರೆ ಕಡೆ ಜಮೀನು ಕೊಟ್ಟಿದ್ದರಿಂದ ಈ ಆಸ್ತಿಗಳಲ್ಲಿ ಹಿಸ್ಸೆ ಹೋಗಿಲ್ಲ. ಸದರಿ 3 ಎಕರೆ 4 ಗುಂಟೆ ಜಮೀನು ನನ್ನ ತಾತ ಗೋವಿಂದಯ್ಯ ರವರ ಮಕ್ಕಳಾದ ನನ್ನ ತಂದೆ ಮತ್ತು ಚಿಕ್ಕಪ್ಪ ರವರ ಹಿಸ್ಸೆಗೆ ಹೋಗಿದೆ.

ಅಣ್ಣೇಗೌಡ ಉಃ ಜವರ ರವರಿಗೆ ಸರ್ವೆ ನಂ.6/7 ರಲ್ಲಿ 1 ಎಕರೆ 3 ಗುಂಟೆ ಜಮೀನು ಹಿಸ್ಸೆ ಹೋಗಿದೆ. ಹಿಸ್ಸೆ ಆಗಿರುವ ಬಗ್ಗೆ ವಿಭಾಗ ಪತ್ರ ನೊಂದಣಿ ಆಗಿದೆಯೋ ಇಲ್ಲವೋ ಎಂದು ನಾನು ನೋಡಿಲ್ಲ. ನನ್ನ ತಾತ ಗೋವಿಂದಯ್ಯ ರವರು ಯಾವಾಗ ತೀರಿಹೋದರು ಎಂದು ನನಗೆ ಗೊತ್ತಿಲ್ಲ. ನನ್ನ ಅಜ್ಜಿ ಚಿಕ್ಕಹೊನ್ನಮ್ಮ ರವರು 1974 ರಲ್ಲಿ ತೀರಿಹೋಗಿದ್ದಾರೆ. ನನ್ನ ಅಜ್ಜಿ ತೀರಿಹೋದಾಗ ಅವರಿಗೆ ಸುಮಾರು ಎಷ್ಟು ವಯಸ್ಸಾಗಿರಬಹುದು ಎಂದರೆ ಸಾಕ್ಷಿಯು ನಾನು ಆಗ ಚಿಕ್ಕವನಾಗಿದ್ದೆ ಎಂದು ನುಡಿಯುತ್ತಾರೆ.

ನನ್ನ ತಂದೆ 2007 ರಲ್ಲಿ ತೀರಿಹೋಗಿದ್ದಾರೆ. ನನ್ನ ಚಿಕ್ಕಪ್ಪ ವೆಂಕಟರಾಮು ರವರು ತೀರಿಹೋಗಿ 10 ವರ್ಷಗಳಾಗಿವೆ . ನನ್ನ ಅಜ್ಜಿ ಚಿಕ್ಕ ಹೊನ್ನಮ್ಮ ರವರ ಮರಣ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಕುರುಬಗೇರಿಯಲ್ಲಿ ವಾಸವಾಗಿರುವ ಜವರೇಗೌಡ ಬಿನ್ ಅಣ್ಣೇಗೌಡ ಉಃ ಜವರ ದೇಸಿ ಯ ಮೊದಲನೆಯ ಮಗ ಎಂದರೆ ಸರಿ. ಸದರಿ ಜವರೇಗೌಡ ಬಿನ್ ಅಣ್ಣೇಗೌಡ ಉಃ ಜವರ ರವರು 1969 ರಲ್ಲಿ ಪ್ರತಿವಾದಿಗೆ ಕ್ರಯ ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಪಿತ್ರಾರ್ಜಿತ ಆಸ್ತಿಯನ್ನು ನಮ್ಮ ಅಜ್ಜಿ ಚಿಕ್ಕ ಹೊನ್ನಮ್ಮ ಕ್ರಯಕ್ಕೆ ಪಡೆಯಲು ಸಾಧ್ಯವಿಲ್ಲ, ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ

ಸರಿಯಲ್ಲ. ಜವರೇಗೌಡ ಬಿನ್ ಅಣ್ಣೇಗೌಡ ಉಃ ಜವರ ರವರಿಗೆ ದಾವಾ ಆಸ್ತಿ ಪಿತ್ರಾರ್ಜಿತವಾಗಿ ಬಂದಿದೆ.

ಪ್ರತಿವಾದಿಯ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ಕಾಲವಕಾಶ ನೀಡಲಾಯಿತು.

**(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸ.ಇದೆ.**

(ರಘು ಎಂ.)
**2ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ**
**ಅರಕಲಗೂಡು**